**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ 25.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ವಕೀಲರಿಂದ:**

ವಾದಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಸರಿಯಾಗಿ ಕಣ್ಣು ಕಾಣಿಸದೇ ಅರೋಗ್ಯ ಸಮಸ್ಯೆ ಇರುತ್ತದೆ. ಈ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ವಾದಿಗೆ ಹೃದಯ ಸಂಬಂಧಿ ಕಾಯಿಲೆ ಇರುತ್ತದೆ ಎಂದು ಹೇಳುವ ಸಂಬಂದವಾಗಿ ದಾಖಲೆ ಹಾಜರುಪಡಿಸಿರುವುದಿಲ್ಲ. ವಾದಿಯು ಅರೋಗ್ಯದಿಂದ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯದ ಮುಂದೆ ಬಂದರೆ ತನ್ನ ಮತ್ತು ತನ್ನ ಸಹೋದರರ ನಡುವೆ ಅದ ವಿಭಾಗವನ್ನು ಒಪ್ಪಿಕೊಳ್ಳುತ್ತಾರೆ ಎಂದು ಅವರು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ತಂದೆಯ ಹೆಸರು ನಂಜುಂಡಪ್ಪ ಮತ್ತು ಅವರ ತಂದೆ ಹೆಸರು ನಾತಬೋವಿ ಅಗಿರುತ್ತದೆ. ನಿಂಗಯ್ಯ ಬಿನ್ ನಿಂಗರಾಜಪ್ಪ ರವರು ನನ್ನ ತಂದೆಯ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ಸದರಿಯವರು ವಾದಿಯ ಕುಟುಂಬದ ಮೂಲ ಪುರುಷ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಲಿಂಗಯ್ಯ ರವರು ಮೃತರಾಗಿರುವ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ರಂಗಮ್ಮ ರವರು 2003 ರಲ್ಲಿ ಮರಣ ಹೊಂದಿರುತ್ತಾರೆ ಎಂದು ಹೇಳುವ ಸಂಬಂಧವಾಗಿ ದಾಖಲೆ ನೋಡಿರುವುದಿಲ್ಲ. ಸದರಿ ದಿನಾಂಕವನ್ನು ನನ್ನ ಮಾವ ಬರೆದು ಇಟ್ಟಿದ್ದರು.

2) ದೇವರಾಜು, ಚಿಕ್ಕರಾಜು,ನಾಗರಾಜು ರವರು ಜಮೀನುಗಳನ್ನು ವ್ಯವಸಾಯ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿಯವರು ನನ್ನ ಸಹೋದರ ಮಾವಂದಿರು ಎಂದರೆ ಸರಿ. ಸದರಿಯವರು ಈ ಹಿಂದೆ ತಲಾ 23 ರಿಂದ 24 ಗುಂಟೆ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾತ ನಿಂಗಯ್ಯನಿಗೆ ಇಬ್ಬರು ಪತ್ನಿಯರು ಎಂದರೆ ಸರಿ. ಮೊದಲ ಹೆಂಡತಿ ಮಗ ರಾಜು ನನಗೆ ಗೊತ್ತಿದ್ದು ಅವರು ಮೃತರಾಗಿರುತ್ತಾರೆ. ಸದರಿ ರಾಜು ರವರಿಗೆ ದಾವಾ 3ನೇ ಸ್ವತ್ತಿನಲ್ಲಿ 30 ಗುಂಟೆ ಸ್ವತ್ತನ್ನು ನೀಡಲಾಗಿತ್ತು ಎಂದರೆ ಸರಿ. ನನ್ನತಾತ ಜೀವಂತವಾಗಿದ ಕಾಲದಲ್ಲಿಯೇ ಅವರ ಅದೇಶದ ಮೇರೆಗೆ ಎಲ್ಲರೂ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಒಟ್ಟಾಗಿ ಮಾಡುತ್ತಿದ್ದರು. ನನ್ನ ತಾತನ 5 ಜನ ಮಕ್ಕಳು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಒಬ್ಬರು ಮಾತ್ರ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು. ನನ್ನ ತಾತನ ಕಾಲದಲ್ಲಿ ವಿಭಾಗ ಮಾಡಿಕೊಂಡು ಅದರಂತೆ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

3) ನಾವು ಈಗ ವಾಸಮಾಡುತ್ತಿರುವ ಮನೆಯನ್ನು ನನ್ನ ತಂದೆಯು ಕ್ರಯಕ್ಕೆ ಪಡೆದಿದ್ದರು. ಸರ್ವೆ ನಂ.64/3 ರಲ್ಲಿ ವಾದಿಗೆ 1 ಗುಂಟೆ ಸ್ವತ್ತನ್ನು 2007 ರಲ್ಲಿ ನೀಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿ ಹೆಸರು ಕೆಂಪಮ್ಮ ಅಗಿರುತ್ತದೆ. ನನ್ನ ತಾಯಿಯನ್ನು ಮೆಣಸಮ್ಮ ಎಂಬ ಮತ್ತೊಂದು ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ವಾದಿಯು ಯಾವುದೇ ಅಸ್ತಿಯಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿಲ್ಲ. 10.03.2007 ರಂದು ವಾದಿ ಮತ್ತು ಪ್ರತಿವಾದಿಗಳು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಅದನ್ನು ಸೃಷ್ಟಿ ಮಾಡಿರುತ್ತಾರೆ. ವಾದಿಗೆ ಸಹ ಬೆಲೆ ಬಾಳುವ ನಿವೇಶನವನ್ನು ನೀಡಿದ್ದು, ಸದರಿ ವಿಭಾಗ ಪತ್ರಕ್ಕೆ ವಾದಿಯು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಸಾಕ್ಷ್ಯ ನುಡಿದ್ದರೆ ಈ ಮೇಲೆ ಹೇಳಿದ ಅಂಶಗಳನ್ನು ಒಪ್ಪಿ ಕೊಳ್ಳುತ್ತಾರೆ ಎಂದು ಅವರ ಸಾಕ್ಷ್ಯ ನುಡಿಯುದಂತೆ ನಾನು ತಡೆದಿರುತ್ತೇನೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಪಂಚಾಯಿತಿ ಸೇರಿರುತ್ತೇವೆ ಎಂದು ಗೊತ್ತಿರುವುದಿಲ್ಲ. ನಾವು ಪ್ರತಿವಾದಿಗಳಿಗೆ ನೋಟೀಸು ನೀಡಿದಾಗ ಅವರೇ ಪಂಚಾಯಿತಿ ಸೇರಿಸಿರುತ್ತಾರೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಯಾವುದೇ ಪಂಚಾಯಿತಿ ನಡೆದಿರಲಿಲ್ಲ ಎಂದರೆ ಸರಿ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ವಾದಿಯು ಭಾಗ ನೀಡುವಂತೆ ಪ್ರತಿವಾದಿಗಳನ್ನಾಗಲೀ ಅಥವಾ ಬೇರೆಯವರನ್ನಾಗಲೀ ಕೇಳಿರುವುದಿಲ್ಲ. ದಿನಾಂಕ 10.03.2007 ರಂದು ವಿಭಾಗ ಅಗುವ ಕಾಲಕ್ಕೆ ಪಂಚಾಯಿತಿ ಸೇರಿರುವುದನ್ನು ಹೊರತುಪಡಿಸಿ ಇದೂವರೆವಿಗೂ ಯಾವುದೇ ಪಂಚಾಯಿತಿ ಅಗಿಲ್ಲ ಎಂದರೆ ಸರಿ. 2007 ರಲ್ಲಿ ಬಂದ ಸ್ವತ್ತಿನಂತೆ ವಾದಿಯು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 10.03.2007 ರ ವಿಭಾಗದಂತೆ ನನ್ನ ತಾಯಿ ಭಾಗಕ್ಕೆ ಬಂದ ಸರ್ವೆ ನಂ.63/7 ರ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

4) ನನ್ನ ತಾಯಿಗೆ 4 ಜನ ಮಕ್ಕಳು ಇದ್ದು, ಅವರುಗಳೆಂದರೆ ನಾನು, ಭಾಗ್ಯಮ್ಮ, ಮಂಜಮ್ಮ ಮತ್ತು ನಂಜುಂಡಸ್ವಾಮಿ. ನನ್ನ ಸಹೋದರ ಮಾವ ಪಾಪಯ್ಯ ರವರ ಮಗಳನ್ನು ನನ್ನ ಅಣ್ಣನಿಗೆ ವಿವಾಹ ಮಾಡಲಾಗಿರುತ್ತದೆ. ನನ್ನ ಅಣ್ಣನನ್ನು 8ನೇ ಪ್ರತಿವಾದಿಯು ವಿವಾಹವಾಗಿರುತ್ತಾರೆ. 8ನೇ ಪ್ರತಿವಾದಿಯು ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಅವರು ನನ್ನ ಅಣ್ಣನ ಜೊತೆ ಇರುವುದಿಲ್ಲ. ಆ ರೀತಿ ಪ್ರತ್ಯೇಕವಾಗಿ ಇರುವುದಕ್ಕೆ ನನಗೆ ಕಾರಣ ಗೊತ್ತಿರುವುದಿಲ್ಲ. ನಾನು, ನನ್ನ ಅಣ್ಣ ಮತ್ತು ನಮ್ಮ ಕುಟುಂಬದವರು ವರದಕ್ಷಿಣೆ ತರುವಂತೆ 8ನೇ ಪ್ರತಿವಾದಿಗೆ ಕಿರುಕುಳ ನೀಡಿ ಮನೆಯಿಂದ ಹೊರಹಾಕಿರುತ್ತೇವೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿಯು ಇದೂವರೆವಿಗೆ ಭಾಗ ಕೇಳದ ಕಾರಣ ನಾನು ಮತ್ತು ನನ್ನ ಕುಟುಂಬದವರು ವಾದಿಗೆ ಪುಸಲಾಯಿಸಿ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಾವ ಚಿಕ್ಕರಾಜು ಮತ್ತು ನಾಗರಾಜುವಿಗೆ ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ.

ಚಿಕ್ಕರಾಜು ರವರು ತನ್ನ ಇಬ್ಬರು ಹೆಣ್ಣು ಮಕ್ಕಳು ಮದುವೆ ಮಾಡಿರುತ್ತಾರೆ ಎಂದರೆ ಸರಿ. ನಾಗರಾಜು ರವರ ಮಕ್ಕಳಿಗೆ ವಿವಾಹವಾಗಿಲ್ಲ ಎಂದರೆ ಸರಿ. ಚಿಕ್ಕರಾಜು ರವರಿಗೆ ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಕಡೆಯಿಂದ ಅದಾಯ ಇರುವುದಿಲ್ಲ ಎಂದರ ಸರಿ. ಅವರು ಯಾವುದಾದರೂ ಕಾರ್ಯಕ್ರಮ ಅಂದರೆ ಮದುವೆ ಅಥವಾ ಹಬ್ಬ ಮಾಡಬೇಕಾದರೆ ಸಾಲ ಮಾಡಬೇಕು ಎಂದರೆ ಅವರು ಕೆಲಸಕ್ಕೆ ಹೋಗುತ್ತಾರೆ. ಚಿಕ್ಕರಾಜುರವರ ಮಗಳು 2ನೇ ಪ್ರತಿವಾದಿ ಅಸ್ಪತ್ರೆಗೆ ಹೋಗುತ್ತಾರೆ.2 ಮತ್ತು 3ನೇ ಪ್ರತಿವಾದಿಗಳು ತಮ್ಮ ಗಂಡದಿರ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ.

5) 1ನೇ ಪ್ರತಿವಾದಿಗೆ ಸುಮಾರು 60 ವರುಷ ವಯಸ್ಸು ಅಗಿದೆ ಎಂದರೆ ಸರಿ. ಅವರು ಮಕ್ಕಳ ಮದುವೆ ಮಾಡುವಾಗ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾಗರಾಜು ರವರ ಮಕ್ಕಳು ಮದುವೆ ವಯಸ್ಸಿ ಗೆ ಬಂದಿರುತ್ತಾರೆ ಎಂದರೆ ಸರಿ. 2007 ರ ವಿಭಾಗದ ಅಧಾರ ಮೇಲೆ ಕಂದಾಯ ಅಧಿಕಾರಿಗಳ ಸೂಚನೆ ಮೇರೆಗೆ 2021 ರಲ್ಲಿ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಅಕ್ರಮವಾಗಿ ವಾದಿಯ ಸಹಿ ಇಲ್ಲದೇ ಮಾಡಿಕೊಂಡಿರುತ್ತಾರೆ. ಈಗಾಗಲೇ ವಿಭಾಗ ಪತ್ರ ಅಗಿರುವುದರಿಂದ ದಾವಾ ಸ್ವತ್ತಿಗಳಿಗೂ ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ರಾಜು ರವರಿಗೆ ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿಯವರು ಮತ್ತು ನಾವು ಅನ್ಯೂನ್ಯವಾಗಿ ಇರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಬಂದು ಸಾಕ್ಶೆ ನುಡಿದರೆ ನಿಜಾಂಶ ಹೊರ ಬರುತ್ತದೆ ಎಂದು ಅವರನ್ನು ಸಾಕ್ಷಿದಾರನಾಗಿ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ ನಮ್ಮ ಮಾತುಕೇಳದ ಕಾರಣ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೇ ವಿಭಾಗ ಅಗಿರುವುದರಿಂದ ಮತ್ತೇ ವಿಭಾಗ ಕೇಳಲು ಸಾದ್ಯವಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ